ತೀರ್ಮಾನಿಸಿದೆ. ಹಾಗೂ ಕಾರ್ಯೋನ್ಮುಖಗೊಂಡಿದೆ. ಜುಲೈ 1995ರೊಳಗೆ ಆ ಕೆಲಸ ಪೂರ್ಣಗೊಳ್ಳತಕ್ಕ ಒಂದು ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ಆಮೇಲೆ ತಾವು ಹರವೆ ಗ್ರಾಮದಲ್ಲಿ ಏನು ಕೇಳಿದ್ದೀರಿ, ಈಗಾಗಲೇ 33 ಕೆವಿ ಸ್ಟೇಷನ್ ಅನ್ನು ಮಂಜೂರು ಮಾಡಿದ್ದೇವೆ. ಆದ್ದರಿಂದ ಬರುವ ಜನವರಿ 1995ಕ್ಕೆ ಮುಗಿಸ ತಕ್ಕಂಥ ಒಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಇವೆಲ್ಲಾ ಆದರೆ ಬಹುಶಃ ನಮಗೆ ಇರತಕ್ಕ ಏನು ವೋಲ್ಟೇಜ್ ಸಮಸ್ಯೆ ಇದೆ, ಅದು ಖಂಡಿತ ಬಗೆ ಹರಿಯುತ್ತದೆ, ಸುಧಾರಿಸುತ್ತದೆ ಎನ್ನತಕ್ಕ ಭರವಸೆಯನ್ನು ಕೊಡುತ್ತೇವೆ. ತಾವು ಏನು ಹೊಸದಾದ ಲೈನ್ ಬದಲಾವಣೆ ಬಗ್ಗೆ ಹೇಳಿದ್ದೀರಿ ನಾವು ಈಗಾಗಲೇ ಅದರ ಬಗ್ಗೆ ಎಸ್ಟಿಮೇಟ್ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಹಳೆ ಲೈನ್ ಬದಲಾವಣೆ ಮಾಡಿ ತಾವು ಹೊಸದಾಗಿ ಲೈನ್ ಹಾಕುವುದಕ್ಕೆ ಈಗಾಗಲೇ ಒಂದು ಯೋಜನೆ ಬಂದಿದೆ. ಅದಕ್ಕೆ ತಾವು ಒಪ್ಪಬೇಕು. ಮತ್ತು ಇದರ ಬಗ್ಗೆ ಮಂಡಲಿಯವರನ್ನು ಕರೆದು ಒಂದು ಸಭೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ವಿ. ಮುನಿಯಪ್ಪ : ಸಾಧ್ಯವಾದರೆ ಸೋಮವಾರ ಐದನೇ ತಾರೀಖು 4ಗಂಟೆಗೆ ಮಂಡಲಿ ಅಧಿಕಾರಿಗಳನ್ನು ಕರೆದು ಸಮಸ್ಯೆ ಏನು ಇದೆ. ತಾವು ಸಹ ಬಂದರೆ ಕುಳಿತು ಚರ್ಚೆ ಮಾಡಿ ಪರಿಹಾರವನ್ನು ಏನು ಕಂಡು ಹಿಡಿಯಬೇಕು ಅದನ್ನು ಕಂಡು ಹಿಡಿಯೋಣ.

ಶ್ರೀ ವಾಟಾಳ್ ನಾಗರಾಜ್ : ಬಹಳ ಮುಖ್ಯವಾಗಿ 10 ಗಂಟೆ ವಿದ್ಯುಚ್ಛಕ್ತಿ ನಿಲ್ಲುತ್ತದೆ. ಸುಮಾರು ಒಂದು ತಿಂಗಳಿಂದ ಇದೇ ಪರಿಸ್ಥಿತಿ ಇದೆ. ಪ್ರತಿ ದಿನ 10 ಗಂಟೆ ಕಗ್ಗತ್ತಲೆ ಆಗಿದೆ. ಅದರ ಬಗ್ಗೆ ನೀವು ತೀವ್ರ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ವಿ. ಮುನಿಯಪ್ಪ : ಆ ದೃಷ್ಟಿಯಿಂದಲೇ ಈಗ ಹೇಳಿದಂತೆ ಎಲ್ಲಾಅಭಿವೃದ್ಧಿ ಕೆಲಸಗಳನ್ನು ಕೈಗೊಂಡರೆ ಖಂಡಿತವಾಗಿ ಸುಧಾರಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಸೋಮವಾರ ನಾಲ್ಕು ಗಂಟೆಗೆ ತಾವು ಸಭೆ ಕರೆದಿದ್ದೀರಾ?

ಶ್ರೀ ವಿ. ಮುನಿಯಪ್ಪ : ಸೋಮವಾರ ಸಂಬಂಧಪಟ್ಟ ಅಧಿಕಾರಿಗಳ ಸಭೆಯನ್ನು ನಾಲ್ಕು ಗಂಟೆಗೆ ಕರೆಯೋಣ ತಮ್ಮನ್ನೂ ಸಹ ಕರೆಯುತ್ತೇನೆ.

ಶಾಸನ ರಚಾನಾ ಕಾರ್ಯ ಕಲಾಪಗಳು

1994ರ ಕರ್ನಾಡಕ ರಾಜ್ಯ ಅಲ್ಪಸಂಖ್ಯಾಂತರ ಆಯೋಗ ವಿಧೇಯಕ (ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ 1994ರ ಕರ್ನಾಟಕ ರಾಜ್ಯ ಅಲ್ಪಸಂಖ್ಯಾಂತರ ಅಯೋಗ ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ 1994 ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯಅಧ್ಯಕ್ಷರೆ, 1994ರ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಅಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಅನುಬಂಧ - I

1994ರ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕ
(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು, ಮಾನ್ಯ ಕೃಷಿ ಸಚಿವರಾದ ಎಚ್ ಎಂ ರೇವಣ್ಣ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೆ, " 1994ರ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇವೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1994ರ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ನೀಡಲಾಯಿತು
ಶ್ರೀ ಎಂ ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ,'1 994 ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ. '
ಅಧ್ಯಕ್ಷರು : ಅನುಬಂಧ 11

ವಿಷಯ : ಕೋಲಾರ ಜಿಲ್ಲೆಯಲ್ಲಿ ಹಾಲು ಉತ್ಪಾದಕರಿಗೆ ಹಾಲಿನ ಬೆಲೆಯನ್ನು ನಿರ್ಧರಿಸುವ ಬಗ್ಗೆ .

ಶ್ರೀ ಸಿ. ಭೈರೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳಲ್ಲಿ ಒಂದು ಸಣ್ಣ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಹಾಲು ಉತ್ಪಾದಕರ ದೊಡ್ಡ ಗಲಾಟೆಯಾಗಿದೆ. ತಾವು ಬಂದಿದ್ದೀರಿ, ಏನೇನೊ ಹೇಳಿದ್ದೀರಿ, ತಾವು ಅದರ